





# ಖಿನ್ನತೆಗೆ ಮದ್ದು

ರಣಬೀರ್ ಕಪೂರ್ ಜತೆಗಿನ ಪ್ರೇಮ ಹಳಸಿಹೋದಾಗ ದೀಪಿಕಾ ಪಡುಕೋಣೆ ಖಿನ್ನತೆಗೆ ಒಳಗಾದ ವಿಚಾರ ಎಲ್ಲರಿಗೂ ಗೊತ್ತಿರುವುದೇ. ಪ್ರೇಮ ವೈಫಲ್ಯದ ಕಾರಣ ನೀಡದಿದ್ದರೂ ದೀಪಿಕಾ, ಖಿನ್ನತೆಗೆ ಒಳಗಾದುದ್ದನ್ನು ಸ್ವತಃ ಹೇಳಿಕೊಂಡಿದ್ದಳು. ಸಿನಿಮಾರಂಗದಲ್ಲಿ ಸಕ್ರಿಯವಾಗಿದ್ದರೂ ಎರಡು ವರ್ಷ ಅದರಿಂದ ಹೊರಬರಲು ಕಷ್ಟಪಡಬೇಕಾಗಿತ್ತು ಎಂದು ಹೇಳಿಕೊಂಡಿದ್ದಳು ದೀಪಿಕಾ. ವೈಫಲ್ಯಗಳನ್ನು ಮೆಟ್ಟಿ ನಿಲ್ಲುವ, ಖಿನ್ನತೆಯಿಂದ ಹೊರಬರುವ ಹೋರಾಟಕ್ಕೆ ನೆರವಾಗಿದ್ದು ಕ್ರೀಡೆ ಎಂದಿದ್ದಾಳೆ ಆಕೆ. ಮೂಲತಃ ಬ್ಯಾಡ್ಮಿಂಟನ್ ಆಟಗಾರ್ತಿಯಾಗಿರುವ ದೀಪಿಕಾ, ತನ್ನ ನೋವು, ಒತ್ತಡಗಳನ್ನು ಕಳೆದುಕೊಳ್ಳಲು ಕ್ರೀಡೆಯ ಮೊರೆ ಹೋಗಿದ್ದಳಂತೆ. ಕ್ರೀಡೆಯ ಕಾರಣದಿಂದಲೇ ತಾನು ಮುಂದಿನ ಹೆಜ್ಜೆ ಇರಿಸಲು ಮತ್ತು ಕಷ್ಟದ ಸನ್ನಿವೇಶಗಳನ್ನು ಎದುರಿಸಲು ಸಾಧ್ಯವಾಗುತ್ತಿರುವುದು ಎಂದು ಹೇಳಿದ್ದಾಳೆ.

'ಸೋಲುಗಳನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ಕ್ರೀಡೆ ನನಗೆ ಹೇಳಿಕೊಟ್ಟಿದೆ. ಹಾಗೆಯೇ ಅದು ಯಶಸ್ಸನ್ನು ನಿಭಾಯಿಸುವ ಬಗೆಯನ್ನೂ ಕಲಿಸಿದೆ. ವಿಧೇಯತೆಯ ಪಾಠ ಸಹ ಮಾಡಿದೆ' ಎಂದಿದ್ದಾಳೆ ದೀಪಿಕಾ.

ತನ್ನೊಳಗೆ ಎಂದಿಗೂ ಸಾಯದ ಅಥ್ಲೀಟ್ ಒಬ್ಬಳಿದ್ದಾಳೆ. ಆಕೆಯೇ ಖಿನ್ನತೆಯ ವಿರುದ್ಧ ಹೋರಾಟಕ್ಕೆ ಶಕ್ತಿ ನೀಡಿದ್ದು ಎಂದು ಅಥ್ಲೆಟಿಕ್‌ನ ಪ್ರಾಮುಖ್ಯವನ್ನು ಹೇಳಿದ್ದಾಳೆ. 'ಎರಡು ವರ್ಷದ ಹಿಂದೆ ಖಿನ್ನತೆಯಿಂದ ಒದ್ದಾಡಿದ್ದೆ. ಮುಳುಗುತ್ತಿದ್ದೇನೆ ಎನಿಸಿತ್ತು. ಹೆಚ್ಚೂ ಕಡಿಮೆ ಬದುಕಿನ ಆಸೆಯನ್ನೇ ತ್ಯಜಿಸಿದ್ದೆ. ಆದರೆ ಸೋಲಿನ ವಿರುದ್ಧದ ಹೋರಾಟ ಹಾಗೂ ಎಂದಿಗೂ ಹಿಂದೆ ಸರಿಯಬಾರದೆಂಬ ಮನೋಬಲವನ್ನು ನನ್ನೊಳಗಿನ ಅಥ್ಲೀಟ್ ನೀಡಿತು. ಪ್ರತಿ ಮಹಿಳೆ ಮತ್ತು ಪುರುಷರು ಕ್ರೀಡೆಯಲ್ಲಿ ಭಾಗಿಯಾಗಬೇಕು. ಏಕೆಂದರೆ ಅದು ನನ್ನ ಬದುಕನ್ನು ಬದಲಿಸಿತು. ಹಾಗೆಯೇ ನಿಮ್ಮ ಬದುಕನ್ನೂ ಬದಲಿಸುತ್ತದೆ. ಬದುಕುವ ಕಲೆಯನ್ನು ಕ್ರೀಡೆ ನನಗೆ ಹೇಳಿಕೊಟ್ಟಿದೆ. ಈಗ ನನ್ನನ್ನು ತಡೆಯುವವರು ಯಾರೂ ಇಲ್ಲ' ಎಂದು ಸ್ಫೂರ್ತಿದಾಯಕ ಮಾತನ್ನು ಹೇಳಿದ್ದಾಳೆ ದೀಪಿಕಾ.



# ಲೈಟ್ಸ್ ಔಟ್!

ಡೇವಿಡ್ ಎಫ್. ಸ್ಯಾಂಡ್‌ಬರ್ಗ್ ನಿರ್ದೇಶನದ ಅತಿಮಾನುಷ ಹಾರರ್ ಥ್ರಿಲ್ಲರ್ ಸಿನಿಮಾ 'ಲೈಟ್ಸ್ ಔಟ್' ಈ ವಾರ ತೆರೆ ಕಾಣಲಿದೆ. ಎರಿಕ್ ಹಿಸೆರೆರ್ ಬರೆದ ಕಥೆಗೆ ಕಂಜ್ಯೂರಿಂಗ್ 1, 2, ಫಾಸ್ಟ್ ಅಂಡ್ ಫ್ಯೂರಿಯಸ್ 7 ಚಿತ್ರಗಳ ನಿರ್ಮಾಪಕರಾದ ಲಾರೆನ್ಸ್ ಗ್ರೇ ಜೇಮ್ಸ್ ವ್ಯಾನ್‌ರೇ ಬಂಡವಾಳ ಹೂಡಿದ್ದಾರೆ.

ಸ್ಯಾಂಡ್‌ಬರ್ಗ್ ಚಿತ್ರೋತ್ಸವದಲ್ಲಿ ಇದೇ ಕಿರು ಚಿತ್ರ ಪ್ರಶಸ್ತಿ ಪಡೆದಿತ್ತು. ಅದೇ ಹೆಸರಿನಲ್ಲಿ ಐದು ಲಕ್ಷ ಅಮರಿಕನ್ ಡಾಲರ್ ಸುರಿದು ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಥೆರೆಸಾ ಪಾಲ್ಮರ್, ಗ್ಯಾಬ್ರಿಯಲ್ ಬೇಟ್‌ಮ್ಯಾನ್, ಅಲೆಗ್ಸ್ಯಾಂಡರ್ ಡಿ ಪರ್ಸಿಯಾ, ಬಿಲ್ಲಿ ಬುರ್ಕೆ, ಮೆರಿಯ ಬೆಲ್ಲೋ ತಾರಾಗಣದಲ್ಲಿದ್ದಾರೆ. ಬೆಂಜಮಿನ್ ವಾಲ್‌ಫಿಶ್‌ರ ಸಂಗೀತವಿದೆ.

■ ಅಮಿ